ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ಆರ್. ಬಿ ವಕೀಲರಿಂದಃ</u>**

ನಿಡಿ.172 ರಂತೆ ಹಾಜರುಪಡಿಸಿದ ಮೃತ್ಯುಪತ್ರವನ್ನು ಮಾಡುವಾಗ ಸದರಿ ಪ್ರಕರಣವು ಚಾಲ್ತಿಯಲ್ಲಿತ್ತು ಎಂದರೆ ನಿಜ. ಪ್ರಸ್ತುತ ಪ್ರಕರಣದಲ್ಲಿ ದಿ.07.12.2012 ದಾವಾ ಆಸ್ತಿಗಳನ್ನು ಮಾರಾಟ, ಹಸ್ತಾಂತರ, ಅಡಮಾನು ಮತ್ತು ಖಾತೆ ಬದಲಾವಣೆಗೆ ಮಾಡದಂತೆ ನ್ಯಾಯಾಲಯದವರು ತಾತ್ಕಾಲಿಕ ಮನಾಯಿ ಆದೇಶ ಮಾಡಿದ್ದ ಬಗ್ಗೆ ನನಗೆ ಗೊತ್ತಿರುತ್ತದೆ. ಆ ಕುರಿತು ರಜಿಸ್ಟರ ಪೋಸ್ಟ ಮೂಲಕ ನೋಟೀಸು ಬಂದಿರುತ್ತದೆ. ನಂತರ ಸದರಿ ಮನಾಯಿ ಆದೇಶವು ಮುದ್ದತ್ತಿನಿಂದ ಮುದ್ದತ್ತಿಗೆ ಮುಂದುವರೆಯುತ್ತಾ ಹೋಗಿರುತ್ತದೆಂದರೆ ಸರಿ. ನಿಪಿ.11 ರಂತೆ ಸಿ. ಟಿ. ಎಸ್. ನಂಬರ 3226 ಆಸ್ತಿಗೆ ಸಂಬಂಧಿಸಿದಂತೆ ಮೊದಲಿನಿಂದ ಯಾರ ಹೆಸರುಗಳು ದಾಖಲೆ ಇರುತ್ತವೆ ಎಂಬುದರ ಬಗ್ಗೆ ನನಗೆ ಮತ್ತು ಪ್ರತಿವಾದಿ ನಂಬರ 1 ರವರಿಗೆ ಗೊತ್ತಿತ್ತು ಎಂದರೆ ಸಾಕ್ಷಿಯು ನಮ್ಮ ತಂದೆಯವರಿಗೆ ಗೊತ್ತಿತ್ತು ಆದರೆ ನನಗೆ ಅಷ್ಟೊಂದು ಗೊತ್ತಿಲ್ಲ. ನಿಪಿ.11 ನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿದ ನಂತರ ಆ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ.11 ರಂತೆ ಸದರಿ ಸಿ. ಟಿ. ಎಸ್. ನಂಬರ 3226 ನೇದ್ದು ಮೂಲತಃ ಕೋಣಪ್ಪ ಶಂಕರೆಪ್ಪ ಅಂಕದವರ ಆಸ್ತಿ ಎಂದರೆ ಸಾಕ್ಷಿಯು ನಮ್ಮ ತಂದೆಯ ಆಸ್ತಿ ಇರುತ್ತದೆಂದು ನುಡಿಯುತ್ತಾರೆ. ಸದರಿ ಆಸ್ತಿ ಗೆ ಸಂಬಂಧಿಸಿದಂತೆ ನನ್ನ ತಂದೆ ಈರಪ್ಪ ಅಂಕದವರವರು ತಮ್ಮ ತಂದೆ ತೀರಿಕೊಂಡಿದ್ದು, ಆತನಿಗೆ ತಾನೊಬ್ಬನೇ ವಾರಸುದಾರನಿದ್ದು, ತನ್ನ ಹೆಸರನ್ನು ದಾಖಲಿಸುವಂತೆ ದಿ.09.04.1958 ರಂದು ಅರ್ಜಿಯನ್ನು ನೀಡಿ ಹೆಸರು ದಾಖಲಿಸಿಕೊಂಡಿರುತ್ತಾನೆಂದರೆ ನನಗೆ ಮಾಹಿತಿ ಇಲ್ಲ. ನಂತರ ನನ್ನ ತಂದೆ ಮೃತ 1 ನೇ ಪ್ರತಿವಾದಿಯ ಸಮ್ಮತಿಯ ಮೇರೆಗೆ ಆತನ 8 ಜನ ಮಕ್ಕಳ ಹೆಸರು ಸಹ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರೀಯವರ ಹೆಸರುಗಳು ಪೋಕಳಾಗಿ ದಾಖಲಾಗಿರುತ್ತವೆ ಎಂದು

ನುಡಿಯುತ್ತಾರೆ. ನನ್ನ ತಂದೆ ಬದುಕಿದ್ದಾಗಲೀಯಾಗಲೀ ಅಥವಾ ಅವರು ತೀರಿಕೊಂಡ ನಂತರವಾಗಲೀ ಸದರೀರವರ ಹೆಸರುಗಳು ಪೋಕಳವಾಗಿ ದಾಖಲು ಆಗಿದ್ದು, ನನ್ನ ಹೆಸರು ಮಾತ್ರ ದಾಖಲಿಸುವಂತೆ ಅರ್ಜಿ ಕೊಟ್ಟಿರುತ್ತೀರಾ? ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿ.17.11.1988 ರಂದು ಶಂಕರೆಪ್ಪ, ಹಣಮಂತ ಮತ್ತು ಬಸವರಾಜ ಮೂರು ಜನರು ಪ್ರಾಪ್ತ ವಯಸ್ಕರಾಗಿದ್ದರಿಂದ ಅಸದಾರ ಕಡಿಮೆ ಮಾಡಿ ಅವರ ಹೆಸರುಗಳನ್ನು ದಾಖಲಿಸುವಂತೆ ಮೃತ 1ನೇ ಪ್ರತಿವಾದಿ ವರದಿಯನ್ನು ಕೊಟ್ಟು ಅವರ ಹೆಸರುಗಳನ್ನು ದಾಖಲಿಸಿರುತ್ತಾನೆಂದರೆ ನನಗೆ ಮಾಹಿತಿ ಇಲ್ಲ. ನನ್ನ ಹೆಸರಿಗೆ ನಿಡಿ.105 ರಂತೆ ಭಕ್ಷಿಸ ಪತ್ರ ಮಾಡಿಕೊಳ್ಳುವಾಗವಾಗಲೀ ಅಥವಾ ಮೃತ್ಯುಪತ್ರ ಮಾಡಿಕೊಳ್ಳುವ ಸಮಯದಲ್ಲಾಗಲೀ ಸದರಿ ಆಸ್ತಿಯು ನನ್ನ ತಂದೆ 1ನೇ ಪ್ರತಿವಾದಿಗೆ ಹೇಗೇ ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ಸದರಿ ಸಂಗತಿ ನನ್ನ ತಂದೆಗೆ ಗೊತ್ತಿರಬಹುದು. ಸದರಿ ಆಸ್ತಿಯು ಮೃತ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುತ್ತದೆಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ನಿಡಿ.105 ಹಾಗೂ ನಿಡಿ.172 ಕ್ಕೆ 1ನೇ ಪ್ರತಿವಾದಿಯ ಉಳಿದ ಮಕ್ಕಳ ಸಹಿಗಳು ಇರುವುದಿಲ್ಲ ಎಂದರೆ ನಿಜ.

ಸದರಿ ಮೇಲೆ ಹೇಳಿದ ಸಿ. ಟಿ. ಎಸ್ ನಂಬರ 3226 ನೇದ್ದಕ್ಕೆ ಸಂಬಂಧಿಸಿದಂತೆ 1 ನೇಪ್ರತಿವಾದಿಯ 08 ಜನ ಮಕ್ಕಳ ಹೆಸರುಗಳು ದಾಖಲಾದ ನಂತರ ಗೋಕಾಕ ಅರ್ಬನ್ ಕೋ ಆಪ್‌ರೇಟಿವ್ ಬ್ಯಾಂಕ , ಗೋಕಾಕದಲ್ಲಿ ಸಾಲ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿ.01.09.1979 ರಂದು ಎಲ್ಲಾ 8 ಜನ ಮಕ್ಕಳು ಸೇರಿಕೊಂಡು ಸದರಿ ಸಾಲವನ್ನು ಮರುಪಾವತಿ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ.

ದಿ.11.11.1980 ರಂದು ಸದರಿ ಸ್ವತ್ತಿನ ಮೇಲೆ 08 ಜನ ಮಕ್ಕಳು ಸೇರಿ ಸಿಂಡಿಕೇಟ್ ಬ್ಯಾಂಕ , ಗೋಕಾಕದಲ್ಲಿ ರೂ.2 ಲಕ್ಷ ಹಣವನ್ನು ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ದಿ.31.07.1987 ರಂದು ಸದರಿ ಸಾಲವನ್ನು ನನ್ನ ತಂದೆ ಹಾಗೂ 08 ಜನ ಮಕ್ಕಳು ಸೇರಿಕೊಂಡು ಮರು ಪಾವತಿ ಮಾಡಿರುತ್ತಾರೆಂದರೆ ಸಾಕ್ಷಿಯು ಸದರಿ ಸಾಲವನ್ನು ನಾನೊಬ್ಬನೇ ಮರುಪಾವತಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ನಾನೇ ಸಾಲ ಪಡೆದಿದ್ದು, ನಾನೇ ಮರುಪಾವತಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಸದರಿ ಸಾಲ ಪಡೆಯಲು ನನ್ನ ತಂದೆಯ ಅಂದರೆ 1ನೇ ಪ್ರತಿವಾದಿಯ ಹೆಸರಿಗೆ ಇದ್ದ ಉತಾರೆಯನ್ನು ಬ್ಯಾಂಕಿಗೆ ಕೊಟ್ಟಿದ್ದೆ. ಸದರಿ ಸಾಲವನ್ನು ನಾನೇ ಮರುಪಾವತಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಮೇಲೆ ಹೇಳಿದ ಭಕ್ಷಿಸ ಪತ್ರ ಹಾಗೂ ಮೃತ್ಯುಪತ್ರದ ಸಾಕ್ಷಿದಾರರಿಗೆ ಸದರಿ ಸ್ವತ್ತು 1ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆಂದು ನನಗೆ ಗೊತ್ತಿರಲಿಲ್ಲ. 1ನೇ ಪ್ರತಿವಾದಿ ವಯೋ ಸಹಜ ಖಾಯಿಲೆಯಿಂದ ಬಳಲುತ್ತಿದ್ದನು.

ನನ್ನ ತಂದೆ ಸುಮಾರು 50-60 ವರ್ಷಗಳ ಹಿಂದೆ ಹಳ್ಳಿಗಳ ಸಂತೆಗಳಿಗೆ ಹೋಗಿ ರೇಡಿಮೇಡ್ ಅರಿವೆಗಳನ್ನು ಮಾರಿಕೊಂಡು ಬರುತ್ತಿದ್ದ. ಆ ಸಮಯದಲ್ಲಿ ನಾವು ಯಾರೂ ಅಂದರೆ ಎಲ್ಲಾ ಮಕ್ಕಳು ಪ್ರಾಪ್ತ ವಯಸ್ಕರಾಗಿರಲಿಲ್ಲ ಎಂದರೆ ನಿಜ. ಈಗ ಸುಮಾರು 50 ವರ್ಷಗಳ ಹಿಂದೆ ನನ್ನ ತಂದೆ ಗಂಡುಮಕ್ಕಳನ್ನು ಸಂತೆಗೆ ಕರೆದುಕೊಂಡು ಹೋಗುತ್ತಿದ್ದ. ಸದರಿ ಸಂತೆಯಲ್ಲಿ ನನ್ನ ತಂದೆಗೆ ಅರಿವೆ ವ್ಯಾಪಾರ ಮಾಡಲು ನಾವು ಎಲ್ಲಾ ಮಕ್ಕಳು ಸಹಾಯ ಮಾಡುತ್ತಿದ್ದೇವು ಎಂದರೆ ಸಾಕ್ಷಿಯು ನನಗೆ ಆವಾಗ ಅಷ್ಟು ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ಈಗ ಸುಮಾರು 50-60 ವರ್ಷಗಳ ಹಿಂದೆ ನನ್ನ ತಂದೆ ಎಲ್ಲಾ ಮಕ್ಕಳಿಗೂ ಅರಿವೆ ವ್ಯಾಪಾರ ಮಾಡುವ ಅನುಭವವನ್ನು ಮಾಡಿಸಿರುತ್ತಾರೆ. ನನ್ನ ತಂದೆಯವರು

ನೀಡಿದ ಅನುಭವದ ಮೇರೆಗೆ ನಾವು ಎಲ್ಲಾ ಮಕ್ಕಳು ಬಟ್ಟೆ ವ್ಯಾಪಾರ ಮಾಡುತ್ತಿದ್ದೇವು ಎಂದರೆ ಸಾಕ್ಷಿಯು ನಮ್ಮ ತಂದೆ ಎಲ್ಲಾ ಮಕ್ಕಳಿಗೂ ಬಟ್ಟೆ ವ್ಯಾಪಾರ ಮಾಡಲು ಮಾರ್ಗದರ್ಶನ ಮಾಡಿರುತ್ತಾರೆಂದು ನುಡಿಯುತ್ತಾರೆ.

ನನ್ನ ತಂದೆ ಹಾಗೂ ನನ್ನ ತಾಯಿಯನ್ನು ಎಲ್ಲಾ ಗಂಡು ಮಕ್ಕಳು ಮನೆಯಿಂದ ಯಾವಾಗ ಹೊರಗೆ ಹಾಕಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿದು, ನಂತರ ಸಾಕ್ಷಿಯು ಅವರು ಸಾಯುವವರೆಗೂ ನನ್ನ ಜೊತೆ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಎಲ್ಲಿ ವಾಸವಾಗಿದ್ದರು ಎಂದರೆ ನನಗೆ ತಿಳುವಳಿಕೆ ಬಂದಾಗಿನಿಂದ ನಾನು ಅವರ ಜೊತೆ ವಾಸವಾಗಿದ್ದೆ ಎಂದು ನುಡಿಯುತ್ತಾರೆ. ಭಕ್ಷಿಸ ಪತ್ರದಲ್ಲಾಗಲೀ, ಮೃತ್ಯುಪತ್ರದಲ್ಲಾಗಲೀ ನಾನೊಬ್ಬನೇ ನನ್ನ ತಂದೆಯ ಜೊತೆ ವಾಸವಾಗಿರುವ ಬಗ್ಗೆ ಒಕ್ಕಣಿ ಇರುವುದಿಲ್ಲ ಎಂದರೆ ನಿಜ.

ನನ್ನ ತಾಯಿ ಸನ್ 1997 ರಲ್ಲಿ ತೀರಿಕೊಂಡಿರುತ್ತಾರೆ. ಸನ್ 1997 ರಿಂದ ಅಂದರೆ ನನ್ನ ತಾಯಿ ತೀರಿಕೊಂಡ ನಂತರ ನಾನು ನನ್ನ ತಂದೆಯ ಸೇವಾ ಸುಶ್ರೂಷಾ ಔಷದೋಪಚಾರ ಮಾಡಿರುತ್ತೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಮೃತ್ಯುಪತ್ರವು ನನ್ನ ತಂದೆ ತೀರಿಕೊಂಡ 7-8 ತಿಂಗಳ ನಂತರ ಅವರ ಬೆಡ್ ರೂಮನಲ್ಲಿದ್ದ ಅಲೆಮೆರಾದಲ್ಲಿ ಸಿಕ್ಕಿರುತ್ತದೆ. ಸದರಿ ಮೃತ್ಯುಪತ್ರವನ್ನು ನನ್ನ ತಂದೆ ಮಾಡಿರುವ ಬಗ್ಗೆ ನಾನು ನಮ್ಮ ವಕೀಲರ ಬಳಿ ಪ್ರಕರಣದ ಬಗ್ಗೆ ವಿಚಾರಿಸಲು ಹೋದಾಗ ನಮ್ಮ ವಕೀಲರು ನಮ್ಮ ತಂದೆಯವರು ಮೃತ್ಯುಪತ್ರವನ್ನು ಮಾಡಿದ್ದು, ಅದನ್ನು ಹುಡುಕುವಂತೆ ನನಗೆ ಹೇಳಿದ್ದರು. ನಾನು ವಕೀಲರ ಹೇಳಿಕೆಯ ಮೇರೆಗೆ ಮೃತ್ಯುಪತ್ರವನ್ನು ಹುಡುಕಿದ ಸಂಗತಿಯು ಮೃತ್ಯುಪತ್ರದ ಸಾಕ್ಷಿದಾರರಿಗೆ ಗೊತ್ತಿರುತ್ತದೆಯಾ? ಎಂದರೆ ಸಾಕ್ಷಿಯು ನಾನು ಅವರಿಗೆ ಭೇಟ್ಟಿಯಾಗಿ ಮೃತ್ಯುಪತ್ರದ ಬಗ್ಗೆ ವಿಚಾರಿಸುತ್ತಿದ್ದು, ಅವರು ಮೃತ್ಯುಪತ್ರ ಮಾಡಿರುವುದು ನಿಜ ಇರುತ್ತದೆಂದು ತಿಳಿಸಿರುತ್ತಾರೆ. ಭಕ್ಷಿಸ ಪತ್ರಕ್ಕೆ ಹಾಗೂ ಮೃತ್ಯುಪತ್ರಕ್ಕೆ ಬೇರೆ ಬೇರೆ ಸಾಕ್ಷಿದಾರರು

ಇರುತ್ತಾರೆ. ಸದರಿ ಸಿ.ಟಿ.ಎಸ್.ನಂಬರ 3226/ಎ ನೇದ್ದರ ಪೈಕಿ ಅರ್ಧ ಹಿಸ್ಸೆ ನನ್ನ ತಂದೆಯ ಉಳಿದ ಗಂಡು ಮಕ್ಕಳು ಹೆಸರಿಗೆ ಪೋಕಳ ದಾಖಲು ಇದ್ದ ಬಗ್ಗೆ ನಾನು ಉತಾರೆಯನ್ನು ನೋಡಿರುತ್ತೇನೆ. ಸದರಿ ಸಂಗತಿ ನನ್ನ ತಂದೆಯವರಿಗೆ ಗೊತ್ತಿತ್ತು. ಮೃತ್ಯುಪತ್ರದಲ್ಲಿ ಪ್ರಸ್ತುತ ದಾವೆ ಚಾಲ್ತಿಯಲ್ಲಿರುವ ಬಗ್ಗೆ ಸಹ ಉಲ್ಲೇಖ ಇರುತ್ತದೆಂದರೆ ನಿಜ. ಮೃತ್ಯುಪತ್ರ ಸಿಕ್ಕಿದ ಬಳಿಕ ಅದನ್ನು ಯಾರು ಗಣಕೀಕೃತ ಮಾಡಿರುತ್ತಾರೆಂದು ನಾನು ವಿಚಾರಿಸಿರುವುದಿಲ್ಲ ಆದರೆ ಯಾವ ಬಾಂಡ ರೈಟರ ಕಡೆ ಮಾಡಿಸಿರುತ್ತಾರೆಂದು ವಿಚಾರಿಸಲಾಗಿ ಅವರು ತೀರಿಕೊಂಡ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಮೃತ್ಯುಪತ್ರದ ಪುಟ ಸಂಖ್ಯೆ 5 ರಲ್ಲಿ ಬರೆದ ದಿನಾಂಕವನ್ನು ತಿದ್ದುಪಡಿ ಮಾಡಿರುತ್ತಾರೆಂದರೆ ನಿಜ. ಅದೇ ರೀತಿ ಮೃತ್ಯುಪತ್ರದ ಪುಟ ಸಂಖ್ಯೆ 1 ರಲ್ಲಿ ಸಹ ಸಹಿಯು ತಿದ್ದುಪಡಿ ಆಗಿರುತ್ತದೆಂದರೆ ಸಾಕ್ಷಿಯು ನನ್ನ ತಂದೆ ಸಹಿ ಮಾಡುವಾಗ ಕೈ ನಡುಗಿಸುತ್ತಿದ್ದರು ಆದ್ದರಿಂದ ಸಹಿ ಮಾಡುವಾಗ ಸ್ವಲ್ಪ ವ್ಯತ್ಯಾಸ ಆಗಿರುತ್ತದೆಂದು ನುಡಿಯುತ್ತಾರೆ.

ಸದರಿ ಪ್ರಕರಣದಲ್ಲಿ ನನ್ನ ತಂದ 1 ನೇ ಪ್ರತಿವಾದಿ ಸಾಕ್ಷ್ಯ ನುಡಿದಿರುವುದಿಲ್ಲ ಆದರೆ ನ್ಯಾಯಾಲಯಕ್ಕೆ ಒಂದು ಬಾರಿ ಬಂದಿದ್ದರು. ನನ್ನನ್ನು ಹೊರತುಪಡಿಸಿ ಉಳಿದ ಮಕ್ಕಳ ಮೇಲೆ ನನ್ನ ತಂದೆಯವರು ದ್ವೇಷ ಭಾವನೆ ಹೊಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿಯ ಮಧ್ಯೆ ಮನಸ್ತಾಪ ಅಥವಾ ಜಗಳ ಉಂಟಾಗಿ, ಯಾವುದೇ ಪ್ರಕರಣಗಳು ಅಥವಾ ಪೊಲೀಸ್ ಠಾಣೆಗೆ ದೂರು ಕೊಡುವುದಾಗಲೀ ಆಗಿರುವುದಿಲ್ಲ. ನಮ್ಮ ಕುಟುಂಬದ ಪಡಿತರ ಚೀಟಿಯಲ್ಲಿ ನಮ್ಮ ತಂದೆ ನಮ್ಮ ಜೊತೆ ವಾಸವಾಗಿರುವ ಬಗ್ಗೆ ಅವರ ಹೆಸರು ದಾಖಲು ಇರುತ್ತದೆಯಾ? ಎಂದರೆ ಸಾಕ್ಷಿಯು ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇರುವುದಿಲ್ಲ ಎಂದು ನುಡಿದು ನಂತರ ನಾನು ಕುಟುಂಬದ ಪಡಿತರ ಚೀಟಿ ಮಾಡಿಸಿಯೇ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನನ್ನ ಜೊತೆ ವಾಸವಾಗಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

ಸದರಿ ಮೃತ್ಯುಪತ್ರದ ಆಸ್ತಿಯು ನನ್ನ ತಂದೆಯ ಸ್ವ ಸಂಪಾದಿತ ಆಸ್ತಿ ಇರುತ್ತದೆಂದು ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ನಾನು ಮುಂಚೆಯಿಂದಲೂ ಮೃತ್ಯುಪತ್ರದ ಆಸ್ತಿಯ ಕಬ್ಜೆಯಲ್ಲಿ ಇದ್ದೆನು. ಎಷ್ಟು ವರ್ಷದಿಂದ ನೀವು ಸದರಿ ಆಸ್ತಿಯ ಕಬ್ಜೆಯಲ್ಲಿ ಇರುತ್ತೀರಿ? ಎಂದರೆ ಸಾಕ್ಷಿಯು ನನಗೆ ತಿಳುವಳಿಕೆ ಬಂದಾಗಿನಿಂದ ನಾನು ಕಬ್ಜೆಯಲ್ಲಿ ಇದ್ದೆನು ಎಂದು ನುಡಿದು, ಸುಮಾರು 50-60 ವರ್ಷಗಳಿಂದ ಕಬ್ಜೆಯಲ್ಲಿದ್ದೆನು ಎಂದು ನುಡಿಯುತ್ತಾರೆ. ಯಾವ ನಾತೆಯಿಂದ ಕಬ್ಜೆಯಲ್ಲಿದ್ದೀರಿ? ಎಂದರೆ ಸಾಕ್ಷಿಯು ನಾನು ನನ್ನ ತಂದೆಯ ಮಗನಾಗಿ ಅವರ ಜೊತೆ ಕಬ್ಜೆಯಲ್ಲಿದ್ದೆನು ಎಂದು ನುಡಿಯುತ್ತಾರೆ. ನಾನು ನನ್ನ ತಂದೆಯ ಜೊತೆ ವಾಸವಾಗಿದ್ದ ಬಗ್ಗೆ ಏನು ದಾಖಲೆ ಇರುತ್ತದೆಂದರೆ ಸಾಕ್ಷಿಯು ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಭಕ್ಷಿಸ ಪತ್ರದಲ್ಲಾಗಲೀ, ಅಥವಾ ಮೃತ್ಯುಪತ್ರದಲ್ಲಾಗಲೀ ಸದರಿ ಆಸ್ತಿಯ ಕಬ್ಜೆಯಲ್ಲಿ ನನ್ನ ತಂದೆಯ ಜೊತೆ ನಾನು ಸಹ ಇದ್ದೆನು ಎಂದು ಒಕ್ಕಣೆ ಇರುವುದಿಲ್ಲ ಎಂದರೆ ನಿಜ. ಮೃತ್ಯುಪತ್ರದ ಪ್ರಕಾರ ಯಾವಾಗ ಆಸ್ತಿಯ ಕಬ್ಜೆ ಪಡೆದುಕೊಳ್ಳಲು ಒಕ್ಕಣೆ ಇರುತ್ತದೆಂದರೆ ಸಾಕ್ಷಿಯು ನಾನು ಮೊದಲಿನಿಂದ ಸದರಿ ಆಸ್ತಿಯ ಕಬ್ಜೆಯಲ್ಲಿದ್ದು, ನಮ್ಮ ತಂದೆ ತೀರಿಕೊಂಡ ನಂತರವೂ ಸಹ ನಾನು ಕಬ್ಜೆಯನ್ನು ಮುಂದುವರೆಸಿರುತ್ತೇನೆ. ಮೃತ್ಯುಪತ್ರದ ಸಾಕ್ಷಿದಾರರು ನಮ್ಮ ಸಮಾಜದ ಹಿರಿಯರು ಆಗಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ